ಅಧ್ಯಕ್ಷರು :— ತಾವೂ ಸಚಿವರಾಗಿ ಕೆಲಸ ಮಾಡಿದ್ದೀರಿ. ಇಲ್ಲಿಂದ ಈಗಲೇ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ.

ಶ್ರೀ ಸಿ. ಆರ್.ಸಗೀರ್ ಅಹಮದ್ :— ಅವರ ಖಾತೆಯೇ ಬೇರೆ, ಅವರಿಗೆ ಉತ್ತರಕೊಡಲು ಅವಕಾಶ ಕೊಟ್ಟುಬಿಟ್ಟಿದ್ದೀರಿ.

ಅಧ್ಯಕ್ಷರು :— ಅವೆಲ್ಲಾ ಮಾಡಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳಿಗೆ ಏನಾದರೂ ತೊಂದರೆ ಇದ್ದಾಗ ಅವರ ಪರವಾಗಿ ಇವರಿಗೆ ಜವಾಬ್ದಾರಿ ಒಪ್ಪಿಸಿರುತ್ತಾರೆ. ನಿನ್ನೆ ಕಾಟ್ಟೆರವರ ಪ್ರಶ್ನೆಯನ್ನು ಬೆಲ್ಲದ್‌ರವರು ಕೇಳಿದರು. ಆ ರೀತಿ ಕೇಳಲು ಬರೆದುಕೊಟ್ಟು ಹೋಗಿದ್ದರು. ಇವೆಲ್ಲಾ ವ್ಯವಸ್ಥೆಯಲ್ಲಿ ಇರತಕ್ಕದ್ದೆ. ಅವರು ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೇ, ಆಲೋಚನೆ ಮಾಡುವುದಕ್ಕೆ ಸಮಯ ಎಲ್ಲಿದೆ? ಇನ್ನು ಐದಾರು ತಿಂಗಳುಗಳಲ್ಲಿ ಇವರು ಏನು ಆಲೋಚನೆ ಮಾಡುತ್ತಾರೆ?

ಅಧ್ಯಕ್ಷರು :— ಇನ್ನು ಐದಾರು ತಿಂಗಳುಗಳಲ್ಲಿ ನಿಮಗೆ ತೊಂದರೆಯಾಗದಂತೆ, ನಿಮ್ಮ ಭವಿಷ್ಯಕ್ಕೆ ಏನು ಆಗಬೇಕೋ ಅಂತಹ ಅನುಕೂಲ ಮಾಡಿ ಕೊಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಏನೋ ಮಾನ್ಯ ಅಧ್ಯಕ್ಷರಾದ ತಮ್ಮ ಆರ್ಶೀವಾದದ ಮೇರೆಗೆ ಏನಾದರೂ ನನ್ನ ಜೀವ ಉಳಿಯಬೇಕಷ್ಟೇ.

ದ. ಕನ್ನಡ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ.

187(1292) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಸಹಕಾರ ಘೋಷಿಲಾಗುವುದೇ;

ಆ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸರಕಾರ ಕೈಗೊಂಡ ಕ್ರಮಗಳೇನು?

ಇ) ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳಿಗೆ ಯೋಗ್ಯ ಮಾರಾಟ ಬೆಲೆ ಸಿಗುವಂತೆ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು?

ಈ) ರಾಜ್ಯದ ತೋಟಗಾರಿಕಾ ಉತ್ಪನ್ನಗಳ ರಫ್ತು ಮಾಡಲು ಕೈಗೊಂಡ ಕ್ರಮಗಳೇನು ಈಗಾಗಲೇ ಎಷ್ಟು ಮೊತ್ತದ ರಫ್ತು ಯಾವ ದೇಶಗಳಿಗೆ ಮಾಡಲಾಗಿದೆ?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಇಲ್ಲ

ಆ) ಈ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಘೋಷಿಸದಿದ್ದರೂ ಸಹ ಇಲ್ಲಿ ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಯೋಜನೆ : ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ (ವಿವರಗಳನ್ನು ಲಗತ್ತಿಸಲಾಗಿದೆ.)

ಇ) ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳಿಗೆ ಯೋಗ್ಯ ಮಾರಾಟ ಬೆಲೆ ಸಿಗುವಂತೆ ಮಾಡಲು ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಮಾರುಕಟ್ಟೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಹಕಾರ ಸಂಘಗಳಿಗೆ ನೆರವು ಒದಗಿಸಲಾಗುತ್ತಿದೆ.

2) ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ಉತ್ತೇಜನ ಮಾಡಲು ಕೆಪಕ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

3) ಹಾಪ್‌ಕಾಮ್ಸ್ ಸಂಸ್ಥೆಯನ್ನು ಬಲಪಡಿಸಲಾಗುತ್ತಿದೆ.

4) ಜಿಲ್ಲಾ ಮಟ್ಟದ ತೋಟಗಾರಿಕೆ ಸಹಕಾರ ಸಂಘಗಳನ್ನು ಬಲಪಡಿಸಲಾಗುತ್ತಿದೆ.

5) ರಾಜ್ಯಮಟ್ಟದ ತೋಟಗಾರಿಕೆ ಮಹಾಮಂಡಳಿಯನ್ನು ರಚಿಸಲಾಗಿದೆ.

6) ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ ಮಾಹಿತಿಯನ್ನು ಸಂಗ್ರಹಿಸಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

7) ಶೀಥಲಗೃಹ ಉದ್ಯಮಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

8) ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಉದ್ಯಮವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರಾಜ್ಯದ ತೋಟಗಾರಿಕಾ ಉತ್ಪನ್ನಗಳ ರಫ್ತು ಅಭಿವೃದ್ಧಿ ಪಡಿಸಲು ಇರುವ ತೊಂದರೆಗಳನ್ನು ನಿವಾರಿಸಲು ವಿಶೇಷವಾಗಿ ಕೆಪಕ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯಿಂದ 1998-99ನೇ ಸಾಲಿನಲ್ಲಿ 8026.27 ಟನ್ ವಿವಿಧ ಕೃಷಿ ಉತ್ಪನ್ನಗಳನ್ನು ಕೊಲ್ಲಿ ರಾಷ್ಟ್ರಗಳು, ಯುರೋಪ್, ಶ್ರೀಲಂಕಾ, ಆಸ್ಟ್ರೇಲಿಯಾ, ಸಿಂಗಾಪುರ್ ಅಮೇರಿಕಾ, ಮೆಕ್ಸಿಕೋ, ಮುಂತಾದ ದೇಶಗಳಿಗೆ ರಫ್ತುಮಾಡಿಲಾಗಿದೆ. ಇವುಗಳ ಮೊತ್ತ 19.25 ಕೋಟಿ ರೂಪಾಯಗಳಾಗುತ್ತದೆ. ಹಾಪ್‌ಕಾಮ್ಸ್ ಬೆಂಗಳೂರು ಸಹ ತೋಟಗಾರಿಕೆ ಉತ್ಪನ್ನಗಳನ್ನು ರಫ್ತು ಮಾಡಲು ಆರಂಭಿಸಿದೆ.

ಕ್ರ.ಸಂ.	ಯೋಜನೆಯ ಹೆಸರು		ಅನುದಾನ (ಲಕ್ಷ ರೂ.ಗಳಲ್ಲಿ)
	ಆ) ಜಿಲ್ಲಾ ವಲಯ ಯೋಜನೆಗಳು:		
20.	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ		2.12
21.	ಪ್ರಾತ್ಯಕ್ಷತೆ (ತೋಟಗಾರಿಕೆ ಬೆಳೆಗಾಗಿ ಪ್ರದೇಶ ವಿಸ್ತರಣೆ)		3.00
22.	ವಿಚಾರಗೋಷ್ಠಿಗಳು, ಕ್ಷೇತ್ರೋತ್ಸವಗಳು ಮತ್ತು ಪ್ರದರ್ಶನಗಳು		0.20
23.	ಸರ್ಕಾರಿ ಕಛೇರಿ, ಅತಿಥಿಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ		0.30
24.	ಕೃಷಿ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ		1.20
25.	ತೋಟಗಾರಿಕ ಬೆಳೆಗಳ ಸಸ್ಯೋದತ್ಪಾದನ		0.30
26.	ಸಾಮಾಜಿಕ ತೋಟಗಾರಿಕ		0.25
27.	ಕಿರುಬೀಲಗಳ ಸರಬರಾಜು		0.13
28.	ಶೇ. 50ರಷ್ಟು ಸಹಾಯಧನದಲ್ಲಿ ರೈತರಿಗೆ ಸಸ್ಯ ಸಂರಕ್ಷಣೆ (ರಾಸಾಯನಿಕ ಸರಬರಾಜು)		0.70
29.	ತೋಟಗಾರಿಕ ಕಟ್ಟಡಗಳು		1.05
30.	ಹಣ್ಣು ಮತ್ತು ತರಕಾರಿ ಸಂಸ್ಕರಣೆ ಹಾಗೂ ಸಂರಕ್ಷಣೆ		1.25
31.	ವಿಶೇಷ ಘಟಕ ಯೋಜನೆ (ರಾಜ್ಯ)		4.90
32.	ಗಿರಿಜನ ಉಪ ಯೋಜನೆ (ರಾಜ್ಯ)		3.40
		ಒಟ್ಟು	18.30
		ಒಟ್ಟು (ಅ + ಆ)	186.35

ಅನುಬಂಧ - 1

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗಾಗಿ ಹಾಕಿಕೊಂಡಿರುವ ಕಾರ್ಯಕ್ರಮ : ಯೋಜನೆಗಳ ವಿವರಗಳು (1998-99)

ಕ್ರ.ಸಂ.	ಯೋಜನೆಯ ಹೆಸರು	ಅನುದಾನ (ಲಕ್ಷ ರೂ.ಗಳಲ್ಲಿ)
	ಅ) ರಾಜ್ಯವಲಯ : ಕೇಂದ್ರವಲಯ ಯೋಜನೆಗಳು:	
1.	ತೆಂಗು ಅಭಿವೃದ್ಧಿ ಮಂಡಳಿ ನೆರವಿನೊಂದಿಗೆ ತೆಂಗು ಅಭಿವೃದ್ಧಿ	3.30
2.	ಸಾಂಬಾರು ಬೆಳೆಯ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ	23.35
3.	ಕೋಕೋ ಅಭಿವೃದ್ಧಿಗಾಗಿ ಕೇಂದ್ರ ಕೇಂದ್ರವಲಯ ಯೋಜನೆ	0.275
4.	ಉಷ್ಣ ಮತ್ತು ಒಣಭೂಮಿ ವಲಯ ಹಣ್ಣಿನ ತೋಟಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರವಲಯ ಯೋಜನೆ	17.78
5.	ಗ್ರಾಮೀಣ ಪ್ರದೇಶದಲ್ಲಿ ಪೌಷ್ಟಿಕ ತೋಟಗಳನ್ನು ಸ್ಥಾಪಿಸಲು ರಾಷ್ಟ್ರೀಯ ತೋಟಗಾರಿಕ ಮಂಡಳಿ ನೆರವಿನ ಯೋಜನೆ	0.25
6.	ಹನಿ ನೀರಾವರಿ ಕೇಂದ್ರ ಪುರಸ್ಕೃತ ಯೋಜನೆ	63.325
7.	ವನಿಲ್ಲಾ ಅಭಿವೃದ್ಧಿ ಯೋಜನೆ	7.35
8.	ಕೇಂದ್ರ ವಲಯ ಸುಗಂಧಿತ ಮತ್ತು ಔಷಧೀಯ ಸಸ್ಯಗಳ ಅಭಿವೃದ್ಧಿ ಯೋಜನೆ	0.27
9.	ವಿಸ್ತರಣೆ ಮತ್ತು ತರಬೇತಿ	0.90
10.	ಸಮಗ್ರ ಗೇರು ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ	31.04

ಕ್ರ.ಸಂ.	ಯೋಜನೆಯ ಹೆಸರು	ಅನುದಾನ (ಲಕ್ಷ ರೂ.ಗಳಲ್ಲಿ)
11.	ತೋಟಗಾರಿಕ ಬೆಳೆಗಳ ಉತ್ಕೃಷ್ಟ ಕಸಿ : ಸಸಿ ಗಿಡಗಳ ಉತ್ಪಾದನೆ ಮತ್ತು ವಿತರಣೆ	4.40
12.	ಅಭಿವೃದ್ಧಿಯಾಗದ ಪ್ರದೇಶದಲ್ಲಿ ಫಾರಂ ಮತ್ತು ನರ್ಸರಿಗಳಲ್ಲಿ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ	4.60
13.	ತೋಟಗಾರಿಕೆ ಬೆಳೆಗಳ ಕೀಟ: ರೋಗಗಳ ಸಮಗ್ರ ನಿಯಂತ್ರಣ ಯೋಜನೆ	0.50
14.	ಗಿರಿಜನ ಉಪ ಯೋಜನೆ	1.37
15.	ವಿಶೇಷ ಘಟಕ ಯೋಜನೆ	8.79
16.	ನಮ್ಮ ಮನೆ-ನಮ್ಮ ತೋಟ	1.50
17.	ಸಸ್ಯ ವಿಜ್ಞಾನ ಮತ್ತು ಇತರ ಅಲಂಕಾರಿಕ ಉದ್ಯಾನವನಗಳ ಅಭಿವೃದ್ಧಿ	0.50
18.	ಜೀವನ ಮಾರ್ಗ	2.00
19.	ತೆಂಗಿನ ಕಪ್ಪು ತಲೆ ನಿಯಂತ್ರಣಕ್ಕಾಗಿ ಸಮಗ್ರ ಯೋಜನೆ	4.25
	ಒಟ್ಟು	168.05

ಶ್ರೀ ಎನ್. ಯೋಗೀಶ್ ಭಟ್ :— ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ತೋಟಗಾರಿಕಾ ಉತ್ಪನ್ನಗಳನ್ನು ಬೆಳೆಯುತ್ತಿರುವುದರಿಂದ ಈ ನಿಟ್ಟಿನಲ್ಲಿ ಆ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ವಿಶೇಷವಾಗಿ ಘೋಷಿಸಲು ಸರ್ಕಾರಕ್ಕೆ ಏನು ತೊಂದರೆ ಇದೆ? ಎಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಆ ರೀತಿ ಘೋಷಣೆ ಮಾಡುವುದರಿಂದ ಏನು ಸಿಗುತ್ತದೆ ಎಂದು ಹೇಳಿದರೆ, ನಾನು ಘೋಷಣೆ ಮಾಡದೇ ಇರುವುದಕ್ಕೆ ಏನು ತೊಂದರೆ ಇದೆ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಒಂದೊಂದು ಕಡೆ ಒಂದೊಂದು ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ರೀತಿಯಾಗಿ ಪ್ರತಿಯೊಬ್ಬರೂ ಘೋಷಣೆ ಮಾಡಿ ಎಂದು ಕೇಳಿದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ ಮಾಡದೇ ಇದ್ದರೆ ಏನು ತೊಂದರೆ ಇದೆ ಎಂದು ದಯವಿಟ್ಟು ತಿಳಿಸಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಈ ರೀತಿ ಘೋಷಣೆ ಮಾಡಿದಲ್ಲಿ ತೋಟಗಾರಿಕಾ ಉತ್ಪನ್ನಗಳಿಗೆ ಸಂಬಂಧಪಟ್ಟಂತೆ ವಿಶೇಷವಾಗಿ ಹೆಚ್ಚಿನ ಆದ್ಯತೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ನಾನು ಆ ರೀತಿ ಘೋಷಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಕೃಷಿ ನೀತಿಯಲ್ಲಿ ಐದು ವರ್ಷಗಳ ಅವಧಿಯಲ್ಲಿ ತೋಟಗಾರಿಕಾ ಬೆಳೆಗಳನ್ನು ದ್ವಿಗುಣಗೊಳಿಸಬೇಕು ಅಂದರೆ ನೂರಕ್ಕೆ ನೂರರಷ್ಟು ಹೆಚ್ಚಿಸಬೇಕೆಂಬ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ. ಇಡೀ ರಾಜ್ಯಾದ್ಯಂತ ನಾನಾ ಯೋಜನೆಗಳಲ್ಲಿ ಈ ತೋಟಗಾರಿಕಾ ಬೆಳೆಗಳನ್ನು ಹೆಚ್ಚಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿರುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಲ್ಲಿ ಇದಕ್ಕಾಗಿ ಸುಮಾರು 186.35 ಲಕ್ಷ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಿಸಿದ ವಿವಿಧ ಲೆಕ್ಕ ಶೀರ್ಷಿಕೆಗಳನ್ನು ಓದಬೇಕಾದರೆ ಸಮಯ ಸಾಕಾಗುವುದಿಲ್ಲ, ಆದ್ದರಿಂದ ನಾನು ಒಟ್ಟಾರೆ ಮೊತ್ತವನ್ನು ಹೇಳುತ್ತಿದ್ದೇನೆ. ಅಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರ ಇದೆ. ಕೇಂದ್ರ ಸರ್ಕಾರದ ಸಂಶೋಧನಾ ಕೇಂದ್ರ ಸಹಾ ಅಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆ ಕೃಷಿ ಬೆಳೆಗಳಿಗಿಂತ ತೋಟಗಾರಿಕಾ ಬೆಳೆಗಳೇ ಹೆಚ್ಚು ಇವೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ನನ್ನ ಅನುಭವಕ್ಕೂ ಕೂಡ ಅದು ಬಂದಿದೆ. ಆದರೆ ನಾನಾ ಯೋಜನೆಗಳಡಿಯಲ್ಲಿ ತೋಟಗಾರಿಕಾ ಬೆಳೆಗಳನ್ನು ಹೆಚ್ಚಿಸುವುದಕ್ಕೆ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ತೆಗೆದುಕೊಳ್ಳುತ್ತಿದೆ. ವಿಶೇಷವಾಗಿ ಯಾವುದಾದರೂ ಒಂದು ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ ಮಾಡುವುದರಿಂದ ಯಾವುದೇ ಪ್ರತಿಫಲ ಇಲ್ಲದಿರುವುದರಿಂದ ಆ ರೀತಿ ಘೋಷಣೆ ಮಾಡುವ ಆಲೋಚನೆ ಸರ್ಕಾರಕ್ಕಿಲ್ಲವೆಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು ಈ ಪ್ರಶ್ನೆ ಕೇಳಲಿಕ್ಕೆ ವಿಶೇಷವಾದ ಸಂಗತಿ ಇದೆ. ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬಹಳ ಪ್ರಮುಖವಾದಂತಹ ಬೆಳೆಯಾಗಿದೆ. ಆದರೆ ಅಡಿಕೆ ಬೆಳೆಗೆ ಹಳದಿ ರೋಗ ಮತ್ತು ಕಜ್ಜಿಕೀಟ ರೋಗ ಎಂಬ ರೋಗಗಳು ಬಂದು ಅಡಿಕೆ ತೋಟ ಸಂಪೂರ್ಣವಾಗಿ ನಾಶವಾಗುತ್ತಿದೆ. ಈ ಬಗ್ಗೆ ಸರ್ಕಾರದ ಮೇಲೆ ಮೇಲಿಂದ ಮೇಲೆ ಒತ್ತಡ ತಂದರೂ ಕೂಡ ಸರ್ಕಾರ ಇದಕ್ಕಾಗಿ ಯಾವುದೇ ಪೂರ್ಣ ಪ್ರಮಾಣದ ವ್ಯವಸ್ಥೆಯನ್ನು ಮಾಡಲಿಲ್ಲವೆಂದು ಅತ್ಯಂತ ಬೇಸರದಿಂದ ಹೇಳಬೇಕಾಗಿದೆ. ಬಹುಶಃ ಮಾನ್ಯ ಯೋಗೀಶ್ ಭಟ್‌ರವರು ಅದಕ್ಕಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದಾರೆಂದು ಅನಿಸುತ್ತದೆ. ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ ಮಾಡಿದರೆ ಅಲ್ಲಿ ಬೆಳೆಯುವಂತಹ ತೋಟಗಾರಿಕಾ ಬೆಳೆಗಳಾದ ಅಡಿಕೆ, ಕಾಳು ಮೆಣಸು ಇವುಗಳ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟಂತಾಗುತ್ತದೆ. ಅಲ್ಲಿ ಸಂಶೋಧನಾ ಕೇಂದ್ರಗಳು ಇದ್ದಾಕ್ಷಣ ಅಲ್ಲಿ ಏನೂ ಕೆಲಸಗಳು ಆಗುತ್ತಿಲ್ಲ. ಸಂಶೋಧನಾ ಕೇಂದ್ರಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎಂಬುದು ತಮಗೂ ಗೊತ್ತಿದೆ, ನಾನೇನೂ ಅದರ ಬಗ್ಗೆ ಹೇಳಬೇಕಾಗಿಲ್ಲ. ಆ ರೋಗದ ಬಗ್ಗೆ ಸರ್ಕಾರ ಕ್ರಮವೇನು? ತೋಟಗಾರಿಕಾ ಜಿಲ್ಲೆಯೆಂದು ದಕ್ಷಿಣ ಕನ್ನಡವನ್ನು ಘೋಷಿಸಬೇಕೆಂದು ನಾನೂ ಕೂಡ ಆಗ್ರಹಿಸುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಸದಸ್ಯರು ಅಡಿಕೆ ಮರಕ್ಕೆ ತಗಲುವ ರೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹಳದಿ ಎಲೆರೋಗ ಹಿಂದೆ ಇದ್ದದ್ದು ನಿಜ ಮತ್ತು ಈಗಿರತಕ್ಕದ್ದೂ ನಿಜ. ಇದನ್ನು ತಡೆಗಟ್ಟಲಿಕ್ಕೆ ಕಳೆದ 20-25 ವರ್ಷಗಳಿಂದ ಸಂಶೋಧನೆ ನಡೆಯುತ್ತಿದೆ. ಆದರೆ ಇದುವರೆಗೂ ಕೂಡ ವಿಜ್ಞಾನಿಗಳು ನಿರ್ದಿಷ್ಟವಾಗಿ ಯಾವ ಕಾರಣಕ್ಕಾಗಿ, ಯಾವ ಕೀಟಾಣುವಿನಿಂದ, ಯಾವ ಬ್ಯಾಕ್ಟೀರಿಯಾ ಅಥವಾ ವೈರಸ್‌ನಿಂದಾಗಿ ಈ ರೋಗ ಬರುತ್ತಿದೆ ಎಂದು ಕಂಡು ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಈ ರೋಗವನ್ನು ತಡೆಗಟ್ಟುವ ಸಲುವಾಗಿ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಅಡಿಕೆ ಮರಕ್ಕೆ ಈ ಅಗೋಚರವಾದ ರೋಗ ಬರುತ್ತದೋ ಆ ಮರವನ್ನು ಕಡಿದು ಹಾಕಬೇಕು ಎಂಬ ಒಂದು ಯೋಜನೆ ಇತ್ತು. 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆ ಇಲ್ಲ. ಆ ರೀತಿ ರೋಗ ಪೀಡಿತ ಮರವನ್ನು ಕಡಿದು ಹಾಕಿದರೆ ರೈತರಿಗೆ ಪರಿಹಾರವಾಗಿ ನೂರು ರೂಪಾಯಿಗಳನ್ನು ಕೊಡಲಾಗುತ್ತಿತ್ತು. ರೈತರು ರೋಗ ಪೀಡಿತ ಮರವನ್ನು ಕಡಿಯದೇ, ಕಡಿದಿದ್ದೇವೆ ಎಂದು ಹೇಳಿ ನೂರು ರೂಪಾಯಿಗಳನ್ನು ಪಡೆದುಕೊಳ್ಳುತ್ತಿದ್ದರು. ಈ ಕಾರಣದಿಂದಾಗಿ ರೋಗವನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗಲಿಲ್ಲ. ಇದು ನನಗಿಂತ ಚೆನ್ನಾಗಿ ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗಲೂ ಕೂಡ ರೈತರು ಸ್ವಲ್ಪ ಎಚ್ಚರಿಕೆಯಿಂದ ಇದ್ದರೆ ಆ ರೋಗವನ್ನು ತಡೆಗಟ್ಟಲಿಕ್ಕೆ ಸಾಧ್ಯವಿದೆ. ರೋಗ ಪೀಡಿತ ಮರಗಳನ್ನು ರೈತರುಗಳು ಕಡಿಯದಿರುವುದರಿಂದಾಗಿ ರೋಗ ನಿವಾರಣೆ ಸಾಧ್ಯವಾಗಿಲ್ಲ. ಅದಲ್ಲದೇ ನೊಣದಿಂದಾಗಿ ಬೇರೊಂದು ರೀತಿಯ ರೋಗ ಕೂಡ ಈ ಅಡಿಕೆ ಬೆಳೆಗೆ ಬರುತ್ತದೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳಿಗೆ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸಲು ಯಾವ ಮೂಲ ಸೌಕರ್ಯವನ್ನು ತಾವು ನೀಡುತ್ತಿದ್ದೀರಿ? ಎರಡನೆಯದಾಗಿ ತೋಟಗಾರಿಕಾ ಉತ್ಪನ್ನಗಳ ಮಾಹಿತಿಗಳನ್ನು ಸಂಗ್ರಹಿಸಲು ಯಾವ ಒಂದು ಪದ್ಧತಿಯನ್ನು ಅನುಸರಿಸುತ್ತಿದ್ದೀರಿ ಎಂಬುದನ್ನು ವಿವರಿಸಬೇಕು. ಮೂರನೆಯದಾಗಿ ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣಾ ಉದ್ಯಮವನ್ನು ಬಲಪಡಿಸಲು ಕ್ರಮ ಕೈಗೊಳ್ಳುತ್ತೀರಾ? ಅದಕ್ಕಾಗಿ ಯಾವ ರೀತಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ? ಮತ್ತು ಅದಕ್ಕೆ ಎಷ್ಟು ಸಬ್ಸಿಡಿ ಕೊಡುತ್ತೀರಿ?

ಶ್ರೀ ಸಿ. ಬೈರೇಗೌಡ :— ನಾನು ಮೊನ್ನೆ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದಂತೆ ನಮ್ಮ ದೇಶದಲ್ಲಿ ಶೇಕಡ 0.6ರಷ್ಟು ಮಾತ್ರ ಆಹಾರ ಸಂಸ್ಕರಣೆಯಾಗುತ್ತಿದೆ. ಅದಕ್ಕಾಗಿ ನಾವು ಆಹಾರ ಸಂಸ್ಕರಣಾ ನೀತಿಯೊಂದನ್ನು ರೂಪಿಸಿದ್ದೇವೆ. ಆ ನೀತಿಯ ಪ್ರತಿಯನ್ನು ಈ ಸದನದ ಮುಂದೆ ಕೂಡ ಇಡಲಾಗಿದೆ. ಹಿಂದೆ ಈ ಲೋಪ ಏನಿತ್ತು, ಆ ಲೋಪವನ್ನು ಸರಿಪಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತೋಟಗಾರಿಕಾ ಉತ್ಪನ್ನಗಳ ವ್ಯಾಪಾರ ವಹಿವಾಟು ನಡೆಸಬೇಕು, ಹೊರ ದೇಶಗಳಿಗೂ ಕೂಡ ತೋಟಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಬೇಕು ಎಂಬ ಉದ್ದೇಶದಿಂದ ಕೆಹೆಚ್‌ಎಫ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ರಿಜಿಸ್ಟರ್ ಮಾಡಿಸಿದ್ದೇವೆ. ಅದರ ಜೊತೆಗೆ ಕೆಫೆಕ್ ಎಂಬ ಸಂಸ್ಥೆಯನ್ನೂ ಕೂಡ 1996 ರಲ್ಲಿ ನೋಂದಾಯಿಸಿ ಅದರ ಮೂಲಕ ಇದುವರೆಗೂ ಸುಮಾರು 8 ಲಕ್ಷದ 26 ಸಾವಿರ ಟನ್‌ನಷ್ಟು ವಿವಿಧ ಕೃಷಿ ಉತ್ಪನ್ನಗಳನ್ನು ಬೇರೆ ಬೇರೆ ದೇಶಗಳಿಗೆ ರಫ್ತು ಮಾಡುವುದಕ್ಕೆ ಕೂಡ ಕ್ರಮ ಕೈಗೊಂಡಿದ್ದೇವೆ. ಇದಿನ್ನೂ ಪ್ರಾರಂಭಿಕ ಹಂತದಲ್ಲಿದೆ, ಅದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವುದಕ್ಕಾಗಿಯೇ ಕೆಹೆಚ್‌ಎಫ್ ಸಂಸ್ಥೆ ರಿಜಿಸ್ಟರ್ ಆಗಿದೆ. ಕೆಫೆಕ್ ಕೂಡ ವ್ಯಾಪಾರ ವಹಿವಾಟು ನಡೆಸುತ್ತಿದೆ. ಈ ರೀತಿ ಬೆಳೆದಿರುವಂತಹ ಉತ್ಪನ್ನಗಳಿಗೂ ಯೋಗ್ಯವಾದಂತಹ ಬೆಲೆ ದೊರಕಿಸಬೇಕೆಂಬ ಪ್ರಯತ್ನವನ್ನು ನಾವು ನಡೆಸುತ್ತಿದ್ದೇವೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹಿರೇಕೆರೂರ ತಾಲ್ಲೂಕಿನಲ್ಲಿ ಅಕಸ್ಮಿಕ ಅಗ್ನಿ ಅನಾಹುತ.

188(459) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಿರೇಕೆರೂರ ತಾಲ್ಲೂಕ ಚಿಕ್ಕೇರೂರನಲ್ಲಿ 23-2-99 ರಂದು ಸಂಭವಿಸಿದ ಅಗ್ನಿ ಪ್ರಕೋಪದಲ್ಲಿ ಹಾನಿಗೆ ಒಳಗಾದ ಕುಟುಂಬಗಳ ಸಂಖ್ಯೆ ಎಷ್ಟು ಮತ್ತು ಹಾನಿಗೊಳಗಾದ ಕುಟುಂಬಗಳಿಗೆ ಪರಿಹಾರ ಒದಗಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಒದಗಿಸಿದ ಪರಿಹಾರದ ಪ್ರಮಾಣ ಎಷ್ಟು?